## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC.No.894/2024**
**CW : 03 PW: 01**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 13.11.2025**

| | |
|---|---|
| ಹೆಸರು | : ವಿಜಯಲಕ್ಷ್ಮಿ ಲಷ್ಕರ |
| ತಂದೆಯ ಹೆಸರು | : ಕನಕಪ್ಪ |
| ವಯಸ್ಸು | : 37 |
| ಉದ್ಯೋಗ | : ಅಬಕಾರಿ ಉಪ ನಿರೀಕ್ಷಕರು |
| ವಾಸಸ್ಥಳ | : ಚಿತ್ತಾಪೂರ |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ದಿ: 04/07/2022 ರಿಂದ 13/01/2025 ರವರೆಗೆ ನಾನು ಚಿತ್ತಾಪೂರ ವಲಯದಲ್ಲಿ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಈ ಪ್ರಕರಣದಲ್ಲಿ ನಾನು ದಿ: 16/07/2024 ರಂದು ಸಾಯಂಕಾಲ 5.40 ಕ್ಕೆ ಶಹಾಬಾದ ನಗರದ ಸ್ಟೇಷನ್ ತಾಂಡಾದ ಬಳಿ ಅಕ್ರಮವಾಗಿ ಸಾರಾಯಿ ಮಾರಾಟ ಮಾಡುವ ಕುರಿತು ಭಾತ್ಮಿ ಬಂದಿದ್ದು, ನಂತರದಲ್ಲಿ ನಾನು ಅಬಕಾರಿ ಉಪ ನಿರೀಕ್ಷಕ ಚಾಸಾ-4 ರಿಂದ 6 ಇವರ ನೇತೃತ್ವದಲ್ಲಿ ಭಾತ್ಮಿಯ ಮೇರೆಗೆ ಸಿಬ್ಬಂದಿಗಳೊಡನೆ ಭಾತ್ಮಿ ಸ್ಥಳಕ್ಕೆ ಭೇಟಿ ನೀಡಿ ಶಹಾಬಾದ ಪಟ್ಟಣದ ಬಸ ನಿಲ್ದಾಣದ ಬಳಿ ನಿಂತಿರುವ ಚಾಸಾ-1 ಹಾಗೂ 2 ಇವರನ್ನು ಪಂಚರನ್ನಾಗಿ ಬರಮಾಡಿಕೊಂಡು ಸದರಿ ಭಾತ್ಮಿಯ ವಿಚಾರವನ್ನು ಪಂಚರಿಗೆ ತಿಳಿಸಿ ಹೇಳಲಾಯಿತು. ಅದಕ್ಕೆ ಸದರಿ ವ್ಯಕ್ತಿಗಳು ಒಪ್ಪಿ ಪಂಚರಾಗಿರುತ್ತಾರೆ.

ನಾನು ನಮ್ಮ ಸಿಬ್ಬಂದಿಗಳೊಡನೆ ಹಾಗೂ ಪಂಚರ ಸಮೇತ ಘಟನಾ ಸ್ಥಳಕ್ಕೆ ಹೋಗಿದ್ದು, ಅಲ್ಲಿ ಒಬ್ಬ ಮಹಿಳೆಯು ನಮ್ಮನ್ನು ಸಮವಸ್ತ್ರದಲ್ಲಿ ನೋಡಿ ಓಡಿ ಹೋಗಿರುತ್ತಾಳೆ, ಅವಳನ್ನು ಹಿಡಿಯಲು ಯತ್ನಿಸಿದಾಗ ಅವಳು ಸಂದಿಯಲ್ಲಿ ಓಡಿ ಹೋಗಿರುತ್ತಾಳೆ. ಭಾತ್ಮಿ ಬಂದ ಸ್ಥಳದ ಹತ್ತಿರ ಹೋಗಿ ನೋಡಲಾಗಿ ಮಹಿಳೆಯ ಕುರಿತು ವಿಚಾರ ಮಾಡಿದಾಗ ಆರೋಪಿತಳ ಹೆಸರು ಲಲಿತಾಬಾಯಿ ಗಂಡ ಯುವರಾಜ ರಾಠೋಡ ಎಂದು ತಿಳಿದುಬಂದಿತು.

ಸ್ಥಳದಲ್ಲಿ ನೆರೆದಿರುವ ಜನರಿಗೆ ಪಂಚರಾಗಲು ಕೇಳಿಕೊಂಡಾಗ ಅದಕ್ಕೆ ಯಾರೂ ಒಪ್ಪಲಿಲ್ಲ. ಶೋದನಾ ವಾರಂಟನ್ನು ಪಡೆದುಕೊಳ್ಳಲು ಸಮಯವಿಲ್ಲದ ಕಾರಣ ಸ್ಥಳದಲ್ಲಿಯೇ ಶೋಧನಾ ಸಮುಚ್ಚಯ ವರದಿಯನ್ನು ತಯಾರಿಸಿ ಅದರ ಮೇಲೆ ಪಂಚರ ಸಹಿಯನ್ನು ಪಡೆದುಕೊಂಡಿದ್ದು ಇರುತ್ತದೆ. ನಂತರದಲ್ಲಿ ಮನೆಯನ್ನು ಶೋಧನೆಗೊಳಪಡಿಸಲಾಯಿತು. ಆ ಮನೆಯಲ್ಲಿ 2 ಲೀಟರ್ ಅಳತೆಯುಳ್ಳ ಪ್ಲಾಸ್ಟಿಕ ಬಾಟಲಿಯಲ್ಲಿ 2 ಲೀಟರ ಕಳ್ಳಭಟ್ಟಿ

ಸಾರಾಯಿ ಹಾಗೂ 10 ಲೀಟರಿನ ಪ್ಲಾಸ್ಟಿಕ ಕೊಡದಲ್ಲಿ ಬೆಲ್ಲದ ಕೊಳೆ ಕಂಡುಬಂದಿತು. ನಾನು ಅಲ್ಲಿ ನೆರೆದಿರುವ ಜನರಿಗೆ ಅಕ್ರಮವಾಗಿ ಕಳ್ಳಭಟ್ಟಿ ಸರಾಯಿಯನ್ನು ತಯಾರಿಸುವುದು ಅಪರಾಧವೆಂದು ಹೇಳಿದೆ.

ನಂತರ ನಾವು ಜಪ್ತುಪಡಿಸಿಕೊಂಡಿರುವ ಕಳ್ಳಭಟ್ಟಿ ಸರಾಯಿಯಲ್ಲಿ ಎರಡು 180 ಎಮ್.ಎಲ್. ಗಾಜಿನ ಬಾಟಲಿಯಲ್ಲಿ ರಾಸಾಯನಿಕ ಪರೀಕ್ಷೆಗಾಗಿ ಕಳ್ಳಭಟ್ಟಿ ಹಾಗೂ ಬೆಲ್ಲದ ಕೊಳೆಯನ್ನು ಒಂದೊಂದು ಬಾಟಲಿಯಲ್ಲಿ ತೆಗೆದುಕೊಂಡಿರುತ್ತೇವೆ. ನಂತರದಲ್ಲಿ ಬಾಟಲಿಯನ್ನು ಬಿಳಿ ಬಟ್ಟೆಯಿಂದ ಸುತ್ತಿ, ದಾರವನ್ನು ಕಟ್ಟಿ ಇಲಾಖೆಗೆ ಸಂಬಂಧಪಟ್ಟ 453 ಅರಕಿನ ಮೊಹರನ್ನು ಹಾಕಿರುತ್ತೇವೆ. ಎರಡು ಬಾಟಲಿಗಳ ಮೇಲೆ ಪಂಚರ ಸಹಿಯುಳ್ಳ ಚೀಟಿಯನ್ನು ಹಚ್ಚಿರುತ್ತೇವೆ.

ಮಾದರಿ ಮುದ್ರೆಯನ್ನು ಸ್ಥಳದಲ್ಲಿಯೇ ತಯಾರಿಸಿ ಜಪ್ತುಪಡಿಸಿಕೊಂಡಿರುವ ಸಾರಾಯಿಯನ್ನು ನಮ್ಮ ತಾಬೆಗೆ ತೆಗೆದುಕೊಂಡಿದ್ದು ಇರುತ್ತದೆ. ನನ್ನ ಸಮಕ್ಷಮದಲ್ಲಿ ಪಂಚನಾಮೆಯು ಜರುಗಿದ್ದು, ಅದರ ಚೆಕಬಂದಿಯು ಪೂರ್ವಕ್ಕೆ ಶಂಕರ ಅವರ ಮನೆ, ಪಶ್ಚಿಮಕ್ಕೆ ಪಾಳು ಬಿದ್ದ ರೈಲ್ವೆ ವಸತಿ ಗೃಹಗಳು, ಉತ್ತರಕ್ಕೆ ಸಂದಿ ರಸ್ತೆ ಹಾಗೂ ದಕ್ಷಿಣಕ್ಕೆ ರಮೇಶ ಅವರ ಮನೆ ಇರುತ್ತದೆ. ಸದರಿ ಪಂಚನಾಮೆಯನ್ನು ಸಾಯಂಕಾಲ 5.45 ರಿಂದ 6.45 ರವರೆ ಜರುಗಿಸಿರುತ್ತೇವೆ.

ಠಾಣೆಗೆ ಹೋಗಿ ಮುಂದಿನ ಕ್ರಮಕ್ಕಾಗಿ ನ್ಯಾಯಾಲಯಕ್ಕೆ ನಾವು ದಾಖಲಾತಿಗಳನ್ನು ರವಾನಿಸಿರುತ್ತೇವೆ ಹಾಗೂ ಸರ್ಕಾರಿ ತರಪೆ ಒಂದು ಫಿರ್ಯಾದಿಯನ್ನು ಮಾಡಿರುತ್ತೇವೆ. ನಂತರದಲ್ಲಿ ಪ್ರ.ವ.ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ.

ಈ ಹಂತದಲ್ಲಿ ಸಾಕ್ಷಿದಾರರಿಗೆ ಎರಡು ಗಾಜಿನ ಬಾಟಲಿಯನ್ನು ತೋರಿಸಿದ್ದು ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಮು.ಮಾ.1 ಹಾಗೂ 2 ಎಂದು ಗುರುತಿಸಲಾಯಿತು. ಸಾಕ್ಷಿದಾರರಿಗೆ ಜಪ್ತು ಪಂಚನಾಮೆಯನ್ನು ತೋರಿಸಲಾಗಿ, ಅದನ್ನು ಗುರುತಿಸಿರುವ ಕಾರಣ ನಿ.ಪಿ.1 ಎಂದು, ಅದರ ಮೇಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ.1 (ಎ) ಎಂದು, ಶೋಧನಾ ಸಮುಚ್ಚಯವನ್ನು ನಿ.ಪಿ.2 ಎಂದು, ಅದರ ಮೇಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ.2 (ಎ) ಎಂದು, ಅರಕಿನ ಗುರುತುಳ್ಳ ಮಾದರಿ ಮುದ್ರೆ ನಮೂನೆಯನ್ನು ನಿ.ಪಿ.3 ಎಂದು, ಅದರ ಮೇಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ.3 (ಎ) ಎಂದು,

ಫಿರ್ಯಾದಿಯನ್ನು ನಿ.ಪಿ.4 ಎಂದು, ಅದರ ಮೇಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ.4 (ಎ) ಎಂದು, ಪ್ರ.ವ.ವರದಿಯನ್ನು ನಿ.ಪಿ.5 ಎಂದು, ಅದರ ಮೇಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ.5 (ಎ) ಎಂದು ನಿಶಾನೆಗೊಳಿಸಲಾಯಿತು. ಮುಂದಿನ ತನಿಖೆಗಾಗಿ ನಾನು ಸದರಿ ದಾಖಲಾತಿಗಳನ್ನು ಚಾಸಾ-10 ರವರಿಗೆ ಹಸ್ತಾಂತರಿಸಿರುತ್ತೇನೆ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ</u>**

ಘಟನಾ ದಿನಾಂಕದಂದು ನಾನು ಕಛೇರಿಯಲ್ಲಿ ಇದ್ದಾಗ ಭಾತ್ಮಿಯು ಬಂದಿದ್ದು ಇರುತ್ತದೆ, ಆಗ ಸಮಯ 4 ಗಂಟೆ ಆಗಿತ್ತು. ನನ್ನನ್ನು ಹೊರತುಪಡಿಸಿ ಠಾಣೆಯಲ್ಲಿ 2 ಜನ ಸಿಬ್ಬಂದಿಗಳು ಇದ್ದರು. ದಾಳಿಯ ಕುರಿತು ನಾನು ನಮ್ಮ ಠಾಣೆಯಲ್ಲಿ ಇರುವ ಕೇಸ ಡೈರಿಯಲ್ಲಿ ನಮೂದು ಮಾಡಿ ಹೋಗುತ್ತೇವೆ. ಸದರಿ ಕೇಸ್ ಡೈರಿಯನ್ನು ತನಿಖೆಯ ಸಮಯದಲ್ಲಿ ತನಿಖಾಧಿಕಾರಿಗೆ ನೀಡಿರುವುದಿಲ್ಲ.

ಚಾಸಾ-1 ಹಾಗೂ 2 ಇವರನ್ನು ನಾವೇ ಪರಿಚಯ ಮಾಡಿಕೊಂಡು ಸಿಬ್ಬಂದಿಗಳ ಮುಖಾಂತರ ಕರೆದುಕೊಂಡು ಬಂದಿದ್ದು ಇರುತ್ತದೆ. ಎರಡೂ ಪಂಚರು ಚಿತ್ತಾಪುರ ಹಾಗೂ ವಾಡಿಯ ವಾಸಿಗಳಾಗಿರುತ್ತಾರೆ ಎಂದರೆ ಸರಿ. ಈ ಪ್ರಕರಣದಲ್ಲಿ ನಾವು ಪಂಚರನ್ನು 5.30 ರ ಸುಮಾರಿಗೆ ಬರಮಾಡಿಕೊಂಡಿರುತ್ತೇವೆ. ನಾವು ಚಿತ್ತಾಪೂರನ್ನು 5 ಗಂಟೆ ಸುಮಾರಿಗೆ ಬಿಟ್ಟಿರುತ್ತೇವೆ. ಗುನ್ನಾ ಜಾಗೆಯಲ್ಲಿರುವ ಮನೆಯ ಕುರಿತು ನಾನು ನಿ.ಪಿ.1 ರಲ್ಲಿ ಆಗಲಿ ಅಥವಾ 4 ರಲ್ಲಾಗಲಿ ವಿವರವಾಗಿ ನಮೂದು ಮಾಡಿರುವುದಿಲ್ಲ. ಸದರಿ ಮನೆಯು ಆರ್.ಸಿ.ಸಿ. ಕಟ್ಟಡವಾಗಿರುತ್ತದೆ ಎಂದು ನಾನು ನಿ.ಪಿ.1 ರಲ್ಲಿ ನಮೂದು ಮಾಡಿರುವುದಿಲ್ಲ.

ನನ್ನ ಜೊತೆ ನನ್ನ ಸಿಬ್ಬಂದಿಗಳು ಓಡಿ ಹೋದ ಮಹಿಳೆಯನ್ನು ಹಿಡಿಯಲು ಪ್ರಯತ್ನ ಮಾಡಿದೆವು. ಘಟನಾ ಸ್ಥಳದ ಬಳಿ ಸಾಕಷ್ಟು ಮನೆಗಳು ಇರುತ್ತವೆ ಎಂದರೆ ಸರಿ. ನಮ್ಮನ್ನು ನೋಡಿ ಸುಮಾರು 6-7 ಜನರು ಸೇರಿರುತ್ತಾರೆ. ಆರೋಪಿಯ ಗುರುತಿಸಿರುವ ವ್ಯಕ್ತಿಗಳನ್ನು ಈ ಪ್ರಕರಣದಲ್ಲಿ ನಾವು ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ. ನಮ್ಮ ಜೊತೆ ಸೇರಿರುವ ವ್ಯಕ್ತಿಗಳನ್ನು ಸಾಕ್ಷಿದಾರರನ್ನಾಗಿ ಮಾಡಲು ಕೇಳಿಕೊಂಡರು ಅವರು ಅದಕ್ಕೆ ಒಪ್ಪಲಿಲ್ಲ. ನಿ.ಪಿ.1 ರಲ್ಲಿ ತಿದ್ದುಪಡಿ ಮಾಡಿರುವುದು ಕಂಡುಬಂದಿದ್ದು ಈ ಕುರಿತು ಸಾಕ್ಷಿದಾರರನ್ನು ಕೇಳಿದಾಗ ಅದರ ಬಗ್ಗೆ ಒಪ್ಪಿಕೊಂಡು ಮಹಿಳೆಯ ಹೆಸರು ಸರಿಯಾಗಿ ಬರೆಯದ ಕಾರಣ ತಿದ್ದುಪಡಿ ಮಾಡಿರುತ್ತೇವೆ ಎಂದು ಹೇಳುತ್ತಾರೆ.

ಘಟನೆಯ ದಿನಾಂಕದಂದು ನಾನು ನಮ್ಮ ಸಿಬ್ಬಂದಿಗಳೊಡನೆ ಘಟನಾ ಸ್ಥಳಕ್ಕೆ ಹೋಗಿ ಪಂಚನಾಮೆಯನ್ನು ಜರುಗಿಸಿ ಸಾರಾಯಿಯನ್ನು ಜಪ್ತಿಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶೋಧನಾ ವಾರಂಟಿನ ಮೇರೆಗೆ ಮನೆಯನ್ನು ಶೋಧನೆ ಮಾಡಿದಾಗ ನಮಗೆ ಸಾರಾಯಿ ದೊರಕಿರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮನ್ನು ನೋಡಿ ಒಬ್ಬ ಮಹಿಳೆಯು ಓಡಿ ಹೋಗಿದ್ದು, ಆಕೆಯನ್ನು ಹಿಡಿಯಲು ಪ್ರಯತ್ನ ಮಾಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಂತೆ ಅಕ್ಕಪಕ್ಕದ ಜನರು ಪಂಚರಾಗಲು ನಿರಾಕರಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಜಪ್ತು ಮಾಡಿಕೊಂಡಿರುವ ಸಾರಾಯಿಯಿಂದ 180 ಎಮ್.ಎಲ್. ಬಾಟಲಿಯಲ್ಲಿ ರಾಸಾಯನಿಕ ಪರೀಕ್ಷೆಗಾಗಿ ಅವುಗಳನ್ನು ತೆಗೆದುಕೊಂಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಂತೆಯೇ ಸದರಿ ಬಾಟಲಿಗಳ ಮೇಲೆ ಇಲಾಖಾ ಮುದ್ರೆಯನ್ನು ಒತ್ತಿ ನಮ್ಮ ತಾಬೆಗೆ ತೆಗೆದುಕೊಂಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಅದರಂತೆಯೇ ಜಪ್ತು ಪಡಿಸಿಕೊಂಡಿರುವ ಮುದ್ದೆ ಮಾಲು ಈ ಪ್ರಕರಣಕ್ಕೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಠಾಣೆಯ ಅಂಕಿ ಸಂಖ್ಯೆಗೋಸ್ಕರ ನಾವು ಒಂದು ಖೊಟ್ಟಿ ಫಿರ್ಯಾದಿಯನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ :** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

Sd/-
**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**